# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಹಾಯಕ ಅಭಿಯಂತರರ ಕಛೇರಿ, ವಾರ್ಡ್ ಸಂಖ್ಯೆ 18, ರಾಧಾಕೃಷ್ಣ ದೇವಸ್ಥಾನ.**

**ಸಂಖ್ಯೆ:** ಸ.ಅ/ವಾ-18/ಪಿ.ಆರ್/11/2020-21 **ದಿನಾಂಕ:** 10-02-2021

## ವಾರ್ಡ್ ಸಮಿತಿ ಸಭೆಯ ನಡವಳಿಗಳು

**ವಿಷಯ:** ಮಾನ್ಯ ಆಯುಕ್ತರು ಬಿ.ಬಿ.ಎಂ.ಪಿ ರವರ ಆದೇಶ ಸಂಖ್ಯೆ: ಬಿ12(5)ಪಿ.ಆರ್/35/2020-21 ದಿನಾಂಕ: 21-09-2020. ರವರ ಆದೇಶದಂತೆ ದಿನಾಂಕ: 08-02-2021 ರಂದು ವಾರ್ಡ್ ನಂ:18, ರಾಧಾಕೃಷ್ಣ ದೇವಸ್ಥಾನ ವಾರ್ಡ್ ಸಮಿತಿ ಸಭೆಯ ನಡವಳಿಗಳು.

**:: ಸಭೆಗೆ ಹಾಜರಾಗಿದ್ದವರ ವಿವರಗಳು ::**

| ಕ್ರ.ಸಂ | ಹೆಸರು ಶ್ರೀಮತಿ/ಶ್ರೀ | ಪದನಾಮ |
|---|---|---|
| 1. | ಶ್ರೀ.ಎಸ್.ಬಸವರಾಜು. ಭಾ.ಆ.ಸೇ | ವಾರ್ಡ್ ಸಮಿತಿ ಅಧ್ಯಕ್ಷರು ಮತ್ತು ನೋಡಲ್ ಅಧಿಕಾರಿಗಳು |
| 2. | ಶ್ರೀ. ಈ.ಈರಣ್ಣ. | ಸದಸ್ಯ ಕಾರ್ಯದರ್ಶಿ ವಾಡ್ ನಂ: 18 |
| 3. | ಶ್ರೀ. ಪಿ.ಸಿ ಆನಂದ್ | ಕಿರಿಯ ಅಭಿಯಂತರರು ( ವಿದ್ಯುತ್) |
| 4. | ಶ್ರೀ. ನಾಗರಾಜ. | ಸಹಾಯಕ ಕಂದಾಯ ಅಧಿಕಾರಿ (ಹೆಬ್ಬಾಳ) |
| 5. | ಶ್ರೀಮತಿ ಮಮತ | ಹಿರಿಯ ಆರೋಗ್ಯ ಪರಿವೀಕ್ಷಕರು. |
| 6. | ಶ್ರೀ. ವಿವೇಕ್ | ಕಿರಿಯ ಆರೋಗ್ಯ ಪರಿವೀಕ್ಷಕರು |

ಪ್ರಾರಂಭಿಕವಾಗಿ ಸಭೆಯನ್ನು ಉದ್ದೇಶಿಸಿ ಕಾರ್ಯದರ್ಶಿಗಳು ಸಭೆಯಲ್ಲಿ ಹಾಜರಿದ್ದ ವಾರ್ಡ್‌ನಲ್ಲಿರುವ ನಿವಾಸಿಗಳ ಕ್ಷೇಮಾಬಿವೃದ್ಧಿ ಸಂಘದವರನ್ನು ಹಾಗೂ ಅಧಿಕಾರಿಗಳನ್ನು ಸ್ವಾಗತಿಸಿದರು.

ಸಭೆಯ ಅಧ್ಯಕ್ಷರು, ಅಧಿಕಾರಿ ನೌಕರುಗಳು ಮತ್ತು ಕ್ಷೇಮಾಭಿವೃದ್ಧಿ ಸಂಘದ ಸದಸ್ಯರು ಸೇರಿ ಸ್ವ-ಪರಿಚಯ ಮಾಡಿಕೊಳ್ಳಲಾಯಿತು.

ವಾರ್ಡಿನ ಅಧ್ಯಕ್ಷರು ಮಾತನಾಡುತ್ತಾ ವಾರ್ಡಿನಲ್ಲಿ ಅಭಿವೃದ್ಧಿಯಾಗಬೇಕಾಗಿರುವ ಹಾಗೂ ಕುಂದು ಕೊರತೆಗಳ ಬಗ್ಗೆ ಚರ್ಚಿಸಲಾಯಿತು.

1. ವಾರ್ಡ್‌ನ ವೆಂಕಟಚಾರಿ ನಗರದಲ್ಲಿ ಸುಮಾರು ದಿನಗಳಿಂದ ಶೇಖರಣೆಯಾಗಿರುವ ಕಸವನ್ನು ಕೂಡಲೇ ತೆರವುಗೊಳಿಸಲು ಕಿರಿಯ ಆರೋಗ್ಯ ಪರಿವೀಕ್ಷಕರಾದ ಶ್ರೀ ವಿವೇಕ್ ರವರಿಗೆ ಸೂಚಿಸಲಾಯಿತು.
2. ವಾರ್ಡ್‌ನ ವೆಂಕಟಚಾರಿ ನಗರದಲ್ಲಿ ಶಿಥಿಲಗೊಂಡಿರುವ ಮೋರಿ ಕಾಮಗಾರಿಯನ್ನು ಆದ್ಯತೆಯ ಮೇರೆಗೆ ಮುಂದಿನ ದಿನಗಳಲ್ಲಿ ನಿರ್ಮಿಸಿಕೊಡಲು ವಾರ್ಡ್‌ನ ಅಭಿಯಂತರರಿಗೆ ಸೂಚಿಸಲಾಯಿತು.
3. ಬುಲ್ಲೇವಾಡ್ ಉದ್ಯಾನವನದ ಬಳಿ ಇರುವ ಹಾಪ್‌ಕಾಮ್ಸ್ ಮಳಿಗೆಯಲ್ಲಿ ಮಾರಾಟ ಮಾಡುವ ತರಕಾರಿ ಮತ್ತು ಹಣ್ಣುಗಳ ದರವನ್ನು ನಾಮಫಲಕದಲ್ಲಿ ಪ್ರದರ್ಶಿಸಲು ಹಾಪ್‌ಕಾಮ್ಸ್‌ನ ಸಿಬ್ಬಂಧಿಗೆ ಸೂಚಿಸಲು ವಾರ್ಡ್‌ನ ಅಭಿಯಂತರರಿಗೆ ತಿಳಿಸಲಾಯಿತು.

4. ಸದರಿ ಹಾಪ್‌ಕಾಮ್ಸ್ ನಲ್ಲಿ ಕೊಂಡುಕೊಳ್ಳುವ ಪ್ರತಿಯೊಂದು ವಸ್ತುವಿಗು ರಶೀದಿ ನೀಡಲು ಸೂಚಿಸುವಂತೆ ವಾರ್ಡ್‌ನ ಅಭಿಯಂತರರಿಗೆ ತಿಳಿಸಲಾಯಿತು.
5. ಹೆಚ್.ಐ.ಜಿ ಕಾಲೋನಿಯ ಮೊದಲನೇ ಮುಖ್ಯ ರಸ್ತೆಯಲ್ಲಿರುವ ಕುವೆಂಪು ಮೈದಾನದಲ್ಲಿ ವಿದ್ಯುತ್ ದೀಪ ಅಳವಡಿಸಲು ಕಿರಿಯ ಅಭಿಯಂತರರು (ವಿದ್ಯುತ್) ರವರಿಗೆ ಸೂಚಿಸಲಾಯಿತು.
6. ವಿಸ್ಪರಿಂಗ್ ಮೆಡೋಸ್‌ನ ರೈಲ್ವೇ ಕೆಳಸೇತುವೆ ಬಳಿ ಫೆನ್ಸಿಂಗ್ ಅಳವಡಿಸುವ ಕಾಮಗಾರಿಯನ್ನು ಕೈಗೆತ್ತಿಕೊಳ್ಳುವಂತೆ ಗುತ್ತಿಗೆದಾರರಿಗೆ ಸೂಚಿಸಲು ವಾರ್ಡ್‌ನ ಅಭಿಯಂತರರಿಗೆ ಸೂಚಿಸಲಾಯಿತು.
7. ಹೊರವರ್ತುಲ ರಸ್ತೆಯ ಬಳಿ ಹಾದುಹೋಗುವ ಬೃಹತ್ ಮಳೆನೀರು ಗಾಲುವೆಯ ಸೇತುವೆ ಕೆಳಭಾಗದಲ್ಲಿರುವ ಹೂಳನ್ನು ತೆರವುಗೊಳಿಸಲು ಸಂಬಂಧಪಟ್ಟ ಅಭಿಯಂತರರಿಗೆ ಸೂಚಿಸುವಂತೆ ವಾರ್ಡ್‌ನ ಅಭಿಯಂತರರಿಗೆ ಸೂಚಿಸಲಾಯಿತು.
8. ಸಂಜಯನಗರ ಮುಖ್ಯರಸ್ತೆಯ ಪಾದಾಚಾರಿ ಮಾರ್ಗದಲ್ಲಿರುವ ಹಣ್ಣು ಮತ್ತು ತರಕಾರಿ ಮಾರಾಟ ಮಾಡುವವರ ಸಭೆ ಕರೆಯಲು ಹಿರಿಯ ಆರೋಗ್ಯ ಪರಿವೀಕ್ಷಕರಿಗೆ ತಿಳಿಸಲಾಯಿತು.
9. ಬಿ.ಇ.ಎಲ್ ಮುಖ್ಯರಸ್ತೆಯಲ್ಲಿ ಫೆಬ್ರವರಿ ತಿಂಗಳ ಒಳಗೆ ಬೀದಿ ದೀಪಗಳನ್ನು ಅಳವಡಿಸಲು ಕಿರಿಯ ಅಭಿಯಂತರರು (ವಿದ್ಯುತ್) ರವರಿಗೆ ಸೂಚಿಸಲಾಯಿತು.
10. ಬೀದಿ ದೀಪಗಳಿಗೆ ಮುಂದಿನ ಸಭೆಯ ಒಳಗಾಗಿ ಟೈಮರ್‌ಗಳನ್ನು ಅಳವಡಿಸಲು ಕಿರಿಯ ಅಭಿಯಂತರರು (ವಿದ್ಯುತ್) ರವರಿಗೆ ಸೂಚಿಸಲಾಯಿತು.
11. ವಾರ್ಡ್‌ನಲ್ಲಿ ಒಣಗಿದ ಮರ ಮತ್ತು ಬೀದಿ ದೀಪಗಳಿಗೆ ಅಡ್ಡ ಬರುವ ಮರದ ಕೊಂಬೆಗಳನ್ನು ತೆರವುಗೊಳಿಸಲು ಶ್ರೀ ರವೀಂದ್ರ (ಡಿ.ಆರ್.ಎಫ್.ಓ) ರವರಿಗೆ ಸೂಚಿಸುವಂತೆ ವಾರ್ಡ್‌ನ ಅಭಿಯಂತರರಿಗೆ ಸೂಚಿಸಲಾಯಿತು

ಈ ಮೇಲಿನ ಎಲ್ಲಾ ಅಂಶಗಳಿಗೆ ಸಂಬಂಧಪಟ್ಟಂತೆ ಅಧಿಕಾರಿಗಳೊಂದಿಗೆ ಕೂಲಂಕುಶವಾಗಿ ಚರ್ಚಿಸಿದ್ದು ಸದರಿ ವಿಷಯಗಳ ಬಗ್ಗೆ ಕ್ರಮ ಕೈಗೊಳ್ಳಲು ಸರ್ವಾನುಮತದಿಂದ ತೀರ್ಮಾನಿಸಿ ವಂದನೆಗಳೊಂದಿಗೆ ಈ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಸಹಿ/-

ಕಾರ್ಯದರ್ಶಿಗಳು
ಹಾಗೂ ಸಹಾಯಕ ಅಭಿಯಂತರರು
ವಾರ್ಡ್ ನಂ: 18 ರಾದಾಕೃಷ್ಣ ದೇವಸ್ಥಾನ

ಅಧ್ಯಕ್ಷರು
ಹಾಗೂ ನೋಡಲ್ ಅಧಿಕಾರಿಗಳು
ವಾರ್ಡ್ ನಂ: 18 ರಾದಾಕೃಷ್ಣ ದೇವಸ್ಥಾನ

**<u>ಪ್ರತಿಯನ್ನು:-</u>**

- ☐ ಮಾನ್ಯ ಜಂಟಿ ಆಯುಕ್ತರು (ಪೂರ್ವ) ಬಿ.ಬಿ.ಎಂ.ಪಿ ರವರ ಅವಗಾಹನೆಗಾಗಿ ಸಲ್ಲಿಸಿದೆ.
- ☐ ವಾರ್ಡ್ ಸಮಿತಿಯ ಅಧ್ಯಕ್ಷರ ಮಾಹಿತಿಗಾಗಿ ಕಳುಹಿಸಿದೆ.
- ☐ ವಾರ್ಡ್ ಸಮಿತಿಯ ಸದಸ್ಯರುಗಳ ಮಾಹಿತಿಗಾಗಿ ಕಳುಹಿಸಿದೆ.